# ಕೊಲೊಂಬೋ ಪ್ರಕ್ರಿಯೆಯ ಅಧ್ಯಕ್ಷ ಸ್ಥಾನ ವಹಿಸಿ ಭಾರತದ ಮೊದಲ ಸಭೆ

ಜೂನ್ 29, 2024

ಜಿನೀವಾದಲ್ಲಿ 28 ಜೂನ್ 2024ರಂದು ಅಂತಾರಾಷ್ಟ್ರೀಯ ವಲಸೆ ಸಂಸ್ಥೆ(ಐಒಎಂ)ಯ ಪ್ರಧಾನ ಕಚೇರಿಯಲ್ಲಿ ನಡೆದ ಕಾಯಂ ಪ್ರತಿನಿಧಿ ಮಟ್ಟದ ಸಭೆಯಲ್ಲಿ ಕೊಲೊಂಬೋ ಪ್ರಕ್ರಿಯೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಭಾರತ, ತನ್ನ ಅಧ್ಯಕ್ಷತೆಯಲ್ಲಿ ಮೊದಲ ಸಭೆಯನ್ನು ನಡೆಸಿತು. ಐಒಎಂ, ಜಿನೇವಾದಲ್ಲಿರುವ ತನ್ನ ಪ್ರಧಾನ ಕಚೇರಿಯಲ್ಲೇ ಕೊಲಂಬೋ ಪ್ರಕ್ರಿಯೆಯ ಸಚಿವಾಲಯವನ್ನೂ ನಿರ್ವಹಿಸಿತು.

2. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಸಿಪಿವಿ ಮತ್ತು ಒಐಎ) ಶ್ರೀ ಮುಕ್ತೇಶ್ ಪರ್ದೇಶಿ ಅವರು ನಿಯೋಜಿತ ಅಧ್ಯಕ್ಷರಾಗಿ ವಿಶೇಷ ಭಾಷಣವನ್ನು ಮಾಡಿದರು. ಕೊಲೊಂಬೋ ಪ್ರಕ್ರಿಯೆಯ ಉದ್ದೇಶಗಳನ್ನು ಸುಧಾರಿಸುವಲ್ಲಿ ಹಾಗೂ ಸದಸ್ಯ ರಾಷ್ಟ್ರಗಳ ನಡುವಿನ ಸಹಭಾಗಿತ್ವವನ್ನು ವೃದ್ಧಿಸುವಲ್ಲಿ ಭಾರತದ ಬದ್ಧತೆಯನ್ನು ಅವರು ಒತ್ತಿಹೇಳಿದರು. ಮುಂದಿನ ಎರಡು ವರ್ಷಗಳಲ್ಲಿ ಕೊಲೊಂಬೋ ಪ್ರಕ್ರಿಯೆಯನ್ನು ಮತ್ತಷ್ಟು ಬಲಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಉಪಕ್ರಮಗಳು ಮತ್ತು ಪ್ರಮುಖ ಆದ್ಯತೆಗಳನ್ನು ಕೇಂದ್ರೀಕರಿಸಿದ ಕಾರ್ಯಯೋಜನೆಯನ್ನು ಭಾರತದ ಪ್ರಸ್ತುತಪಡಿಸಿತು. ಕೊಲೊಂಬೋ ಪ್ರಕ್ರಿಯೆ(2024-26)ಯಲ್ಲಿ ಭಾರತದ ಆದ್ಯತೆಗಳೆಂದರೆ, (ಎ) ಕೊಲೊಂಬೋ ಪ್ರಕ್ರಿಯೆಯ ಆರ್ಥಿಕ ಸುಸ್ಥಿರತೆಯನ್ನು ಪರಿಶೀಲಿಸುವುದು, (ಬಿ) ಹೊಸ ಸದಸ್ಯ ರಾಷ್ಟ್ರಗಳು ಮತ್ತು ವೀಕ್ಷಕರನ್ನು ಸೇರಿಸಿಕೊಳ್ಳುವ ಮೂಲಕ ಸದಸ್ಯತ್ವವನ್ನು ವಿಸ್ತರಿಸುವುದು, (ಸಿ) ತಾಂತ್ರಿಕ-ಮಟ್ಟದ ಸಹಯೋಗವನ್ನು ಮರುರಚಿಸುವುದು, (ಡಿ) ಅಧ್ಯಕ್ಷತೆಗೆ ರಚನಾತ್ಮಕ ಆವರ್ತನ ಪದ್ಧತಿಯನ್ನು ಅನುಷ್ಠಾನ ಮಾಡುವುದು, (ಇ) ಸುರಕ್ಷಿತ, ಕ್ರಮಬದ್ಧ ಮತ್ತು ನಿಯಮಿತ ವಲಸೆ(ಜಿಸಿಎಂ) ಕುರಿತ ಜಾಗತಿಕ ಒಪ್ಪಂದದ ಪ್ರಾದೇಶಿಕ ಪರಿಶೀಲನೆ ನಡೆಸುವುದು ಮತ್ತು (ಎಫ್) ಅಬುಧಾಬಿ ಡೈಲಾಗ್(ಎಡಿಡಿ) ಮತ್ತು ಇತರೆ ಪ್ರಾದೇಶಿಕ ಪ್ರಕ್ರಿಯೆಗಳೊಂದಿಗೆ ಸಂವಾದವನ್ನು ನಡೆಸುವುದು.

3. ಕೊಲೊಂಬೋ ಪ್ರಕ್ರಿಯೆ ಎನ್ನುವುದು ಪ್ರಾಥಮಿಕವಾಗಿ ವಲಸೆ ಕಾರ್ಮಿಕರ ಮೂಲ ದೇಶಗಳೆಂದು ಪರಿಗಣಿಸಲಾದ ಏಷ್ಯಾದ 12 ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಪ್ರಾದೇಶಿಕ ಸಮಾಲೋಚನಾ ಪ್ರಕ್ರಿಯೆಯಾಗಿದೆ. ಸಾಗರೋತ್ತರ ಉದ್ಯೋಗದ ನಿರ್ವಹಣೆಯಲ್ಲಿ ಅತ್ಯುತ್ತಮ ಅಭ್ಯಾಸಗಳ ವಿನಿಮಯಕ್ಕೆ ಈ ವೇದಿಕೆಯು ಅವಕಾಶ ಕಲ್ಪಿಸುತ್ತದೆ.

4. ಈ ಸಭೆಯು ಸಹಕಾರದ ಸ್ಫೂರ್ತಿಯನ್ನು ಹಾಗೂ ಕೊಲೊಂಬೋ ಪ್ರಕ್ರಿಯೆಯ ಗುರಿಗಳನ್ನು ಈಡೇರಿಸುವ ನಿಟ್ಟಿನಲ್ಲಿ ಹಂಚಿತ ದೃಷ್ಟಿಕೋನವನ್ನೂ ಎತ್ತಿಹಿಡಿಯಿತು.

5. ಸದಸ್ಯತ್ವ ಪಡೆದ ಬಳಿಕ ಇದೇ ಮೊದಲ ಬಾರಿಗೆ ಭಾರತವು 2024ರ ಮೇ ತಿಂಗಳಲ್ಲಿ ಕೊಲೊಂಬೋ ಪ್ರಕ್ರಿಯೆಯ ಅಧ್ಯಕ್ಷತೆಯನ್ನು ವಹಿಸಿತು. ವಲಸೆ ವಿಚಾರಗಳಲ್ಲಿ ಪ್ರಾದೇಶಿಕ ಸಹಕಾರವನ್ನು ವೃದ್ಧಿಸುವಲ್ಲಿ ಈ ಪ್ರಕ್ರಿಯೆಯು ಮಹತ್ವದ ಪಾತ್ರ ವಹಿಸುವುದನ್ನು ಮುಂದುವರಿಸುತ್ತದೆ. ಅದರಲ್ಲೂ ಭಾರತದ ಮುಂಚೂಣಿ ಪಾತ್ರವು, ಎಲ್ಲ ಸದಸ್ಯ ರಾಷ್ಟ್ರಗಳನ್ನೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವ, ವಲಸೆ ಆಡಳಿತವನ್ನು ಸುಧಾರಿಸುವ ಮತ್ತು ಸಂಘಟಿತ ಸಾಗರೋತ್ತರ ಉದ್ಯೋಗಗಳಿಗೆ ಸುರಕ್ಷಿತ, ಕ್ರಮಬದ್ಧ ಮತ್ತು ನಿಯಮಿತ ವಲಸೆ ಉತ್ತೇಜಿಸುವ ಹೊಸ ಬದ್ಧತೆಯನ್ನು ಪ್ರದರ್ಶಿಸಿತು.

**ಜಿನೀವಾ**
**ಜೂನ್ 28, 2024**